**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ**
**ಕ್ರಿಮೀನಲ್ ಮೊಕದ್ದಮೆ ನಂ. 27/2018.**

**ಚಾಸಾ-03**

**ಪ್ರಾಸಾ-06**

**ದಿನಾಂಕಃ 12-01-2026 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಮಂಜುನಾಥ ತಂಃ ರಾಮಣ್ಣ ಗುಂಜಿಕರ |
| ವಯಸ್ಸು | ಃ | 52 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸ | ಃ | ದಾಂಡೇಲಿ |

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ.**

1. ಚಾಸಾ-2 ರವರು ನನಗೆ ಗೊತ್ತು. ಸಾಕ್ಷಿಗೆ **ನಿಪಿ-6** ನ್ನು ತೋರಿಸಲಾಯಿತು, ಅದು ಪಂಚನಾಮೆಯಾಗಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ-6(ಸಿ)** ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿರುವ ಅಂಶಗಳು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಅರಣ್ಯಾಧಿಕಾರಿಗಳ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಲ್ಲ.

**(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಅನುಮತಿಸಲಾಯಿತು)**

**ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ** .

2. ದಿಃ 20-03-2014 ರಂದು ಚಾಸಾ-4 ರವರು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಸಂಜೆ 06-30 ರಿಂದ 07-20 ರ ವರೆಗೆ **ನಿಪಿ-6** ರಂತೆ ಪಂಚನಾಮೆ ಜರುಗಿಸಿ, ಅದರಲ್ಲಿರುವ ಬರೆದಿರುವ ವಸ್ತುಗಳನ್ನು ಆರೋಪಿಯ ಮನೆಯಿಂದ ಜಪ್ತು ಮಾಡಿರುತ್ತಾರೆ

ಎಂದರೆ ಸರಿ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನ ಪರಿಚಯಸ್ಥ ಎಂದರೆ ಸರಿ. ಆದ್ದರಿಂದ ಆರೋಪಿಗೆ ಸಹಾಯ ಮಾಡಲು, ಎಲ್ಲಾ ವಿಷಯಗಳು ಗೊತ್ತಿದ್ದರು ಸಹ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ. ಸಿ.ಹೆಚ್. ವಕೀಲರಿಂದ**

3. ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ .

**ಮರು ವಿಚಾರಣೆ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಸಹಿ ಇದೆ/-**

**(ತೇಜಸ್ವಿನಿ ಸೊಗಲದ)**

**ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ. ದಂಡಾಧಿಕಾರಿಗಳು,ದಾಂಡೇಲಿ.**